ತುರುವೇಕೆರೆ ಪಟ್ಟಣದಲ್ಲಿ ರೇಷ್ಮೆ ಗೂಡಿನ ಮಾರುಕಟ್ಟೆ ಪ್ರಾರಂಭಿಸುವುದು.

1262 (1112) ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣಯ್ಯ)(ತುರುವೇಕೆರೆ) :— ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ತುರುವೇಕೆರೆ ವಿಧಾನಸಭಾ ಕ್ಷೇತ್ರವು ರೇಷ್ಮೆ ಬೆಳೆಗೆ ಪ್ರಸಿದ್ಧವಾಗಿದ್ದು, ರೈತರಿಗೆ ರೇಷ್ಮೆ ಗೂಡಿನ ಮಾರುಕಟ್ಟೆ ಸೌಲಭ್ಯ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ.

ಇ. ಈ ವರ್ಷ ರೇಷ್ಮೆ ಗೂಡಿನ ಮಾರುಕಟ್ಟೆ ಪ್ರಾರಂಭಿಸಲಾಗುವುದೇ?

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :—

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಡಿಸೆಂಬರ್ 2001ರ ಅಂತ್ಯಕ್ಕೆ 329 ಹೆಕ್ಟೇರ್ ಹಿಪ್ಪುನೇರಳೆ ವ್ಯವಸಾಯವಿದ್ದು 84 ಮೆ: ಟನ್ ಗೂಡು ಉತ್ಪಾದಿಸಲಾಗಿದೆ. ಇಲ್ಲಿ ರೇಷ್ಮೆ ಗೂಡಿನ ಮಾರುಕಟ್ಟೆ ಇರುವುದಿಲ್ಲ.

ಆ. ತುಮಕೂರು ಜಿಲ್ಲೆಯ ತುಮಕೂರು ಮತ್ತು ಮಧುಗಿರಿಯಲ್ಲಿ ಸರ್ಕಾರಿ ಗೂಡಿನ ಮಾರುಕಟ್ಟೆಗಳನ್ನು ಸ್ಥಾಪಿಸಲಾಗಿದೆ.

ಇ. ಸಧ್ಯದಲ್ಲಿ ಇಲ್ಲ.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ.

1263 (1203) ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ತುರುವೇಕೆರೆ) :— ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಷ್ಟದಲ್ಲಿದೆಯೇ? ಎಷ್ಟು ರೂಪಾಯಿಗಳ ನಷ್ಟ ಅನುಭವಿಸುತ್ತಿದೆ? ಈ ನಿಗಮದ ಕಳೆದ ಮೂರು ವರ್ಷಗಳ ಲಾಭ ನಷ್ಟದ ವಿವರಗಳನ್ನು ನೀಡುವುದು.

ಆ) ನಿಗಮದಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಇವರಿಗೆ ನೀಡುತ್ತಿರುವ ಮಾಸಿಕ ವೇತನ ಎಷ್ಟು?

ಇ) ನಷ್ಟದಲ್ಲಿರುವ ನಿಗಮವನ್ನು ಅಭಿವೃದ್ಧಿಪಡಿಸುವಲ್ಲಿ ಸರ್ಕಾರ ಹಾಕಿಕೊಂಡಿರುವ ಕಾರ್ಯ ಯೋಜನೆಗಳು ಯಾವುವು?

ಈ) ನಿಗಮದ ನೌಕರರಿಗೆ ಸ್ವಯಂ ನಿವೃತ್ತಿ ಯೋಜನೆ ಜಾರಿಗೆ ತರುವ ಬದಲು ನೌಕರರಿಂದ ಉತ್ತಮ ಗುಣಮಟ್ಟದ ಕೆಲಸ ಪಡೆದು ನಿಗಮವನ್ನು ಅಭಿವೃದ್ಧಿಪಡಿಸುವುದು ಸಾಧ್ಯವಿಲ್ಲವೇ? ಈ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಎಂ. ಮಹದೇವ್ (ರೇಷ್ಮೆ, ಮತ್ತು ಜವಳಿ ಸಚಿವರು) :—

ಅ) ಹೌದು. ನಿಗಮವು 2000-01ನೇ ಸಾಲಿನಲ್ಲಿ ರೂ.8.01 ಕೋಟಿ ನಷ್ಟವನ್ನು ಅನುಭವಿಸಿದೆ. 2000-01 ರವರೆಗೆ ಒಟ್ಟು 17.19 ಕೋಟಿ ನಷ್ಟವನ್ನು ನಿಗಮವು ಅನುಭವಿಸಿದೆ.

ಕಳೆದ ಮೂರು ವರ್ಷದ ಲಾಭ ಮತ್ತು ನಷ್ಟಗಳ ವಿವರ ಈ ಕೆಳಕಂಡಂತಿದೆ.

1998-99	ರೂ.100.38	ಲಕ್ಷ ಲಾಭ
1999-00	ರೂ.290.83	ಲಕ್ಷ ನಷ್ಟ
2000-01	ರೂ.801.00	ಲಕ್ಷ ನಷ್ಟ

ಆ) ನಿಗಮದಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿ ಸಂಖ್ಯೆ 1316. ಮಾಸಿಕ ವೇತನ ವೆಚ್ಚ ರೂ.127.78 ಲಕ್ಷ.

ಇ) ನಿಗಮವನ್ನು ಅಭಿವೃದ್ಧಿ ಪಡಿಸಲು ಕೈಗೊಂಡಿರುವ ಕಾರ್ಯಕ್ರಮಗಳು:

1) ಸುಮಾರು ವರ್ಷಗಳಿಂದ ನಿಗಮದಿಂದ ಸರ್ಕಾರಕ್ಕೆ ಬಾಕಿ ಇರುವ ಸಾಲ ಮತ್ತು ಅದರ ಮೇಲಿನ ಬಡ್ಡಿ ಒಟ್ಟು ರೂ. 26.00 ಕೋಟಿಗಳನ್ನು ಷೇರು ಬಂಡವಾಳವಾಗಿ ಪರಿವರ್ತಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

2) ಸರ್ಕಾರದ ಎಲ್ಲಾ ಇಲಾಖೆಗಳು ತಮ್ಮ ಒಟ್ಟೆ ಅವಶ್ಯಕತೆಯನ್ನು ಕಡ್ಡಾಯವಾಗಿ ಕೈಮಗ್ಗ ಅಭಿವೃದ್ಧಿ ನಿಗಮದಿಂದಲೇ ಖರೀದಿಸಲು ಸುತ್ತೋಲೆ ಮೂಲಕ ಸೂಚನೆ ನೀಡಲಾಗಿದೆ.

3) ವಿದ್ಯಾ ವಿಕಾಸ ಮತ್ತು ಅಗ್ಗ ದರದ ಸೀರೆ ಮತ್ತು ಪಂಚೆ ಯೋಜನೆಗಳನ್ನು ನಿರಂತರವಾಗಿ ಮುಂದುವರೆಸಿ, ನಿಗಮದಿಂದಲೇ ಈ ಯೋಜನೆಗಳಿಗೆ ಬೇಕಾದ ಬಟ್ಟೆಯನ್ನು ಖರೀದಿಸುವುದು.

ಈ) ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ರವರ ಅಧ್ಯಯನ ವರದಿಯ ಪ್ರಕಾರ ನಿಗಮದಲ್ಲಿ ಸುಮಾರು 300 ಹೆಚ್ಚುವರಿ ನೌಕರರಿದ್ದಾರೆ. ನಿಗಮದ ಕಾರ್ಯ ನಿರ್ವಹಣೆಯನ್ನು ಉತ್ತಮಪಡಿಸಲು ಹಾಗೂ ಅನಾವಶ್ಯಕ ವೆಚ್ಚವನ್ನು ಕಡಿತಗೊಳಿಸಲು ಅಗತ್ಯ ಪ್ರಮಾಣದ ಸಿಬ್ಬಂದಿಯನ್ನು ಹೊಂದುವುದು ಅತ್ಯಾವಶ್ಯಕವಾಗಿದೆ.

ನೌಕರರಿಗೆ ಭವಿಷ್ಯ ನಿಧಿಯ ಯೋಜನೆಯನ್ನು ಜಾರಿಗೆ ತರುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಅರಕಲಗೂಡು ತಾಲ್ಲೂಕು ಮದಗನಹಳ್ಳಿ ಗ್ರಾಮದ ಸರ್ಕಾರಿ ಸ್ಟೋನ್ ಕ್ರಷರ್

1264(1114) ಶ್ರೀ ಪುಟ್ಟಣ್ಣ ಎ. (ಅರಕಲಗೂಡು) :— ಮಾನ್ಯ ಗಣಿ ಮತ್ತು ಭೂವಿಜ್ಞಾನ ಹಾಗೂ ಅಂತರ್ಜಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕು ಮದಗನೂರು ಗ್ರಾಮದ ಸರ್ಕಾರಿ ಸ್ಟೋನ್ ಕ್ರಷರ್‌ನ್ನು ಗುತ್ತಿಗೆ ಬಾಡಿಗೆ ಆಧಾರದ ಮೇಲೆ ನೀಡಲಾಗಿದೆಯೇ;

ಆ) ನೀಡಲಾಗಿದಲ್ಲಿ, ಯಾರಿಗೆ ಯಾವ ದಿನಾಂಕದಿಂದ ಗುತ್ತಿಗೆ ಬಾಡಿಗೆ ಆಧಾರದ ಮೇಲೆ ನೀಡಲಾಗಿದೆ; ಷರತ್ತುಗಳೇನು? ಇದುವರೆಗೆ ಬರುತ್ತಿರುವ ಹಣವೆಷ್ಟು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಹಾಗೂ ಅಂತರ್ಜಲ ಸಚಿವರು) :—

ಅ) ಹಾಸನ ಜಿಲ್ಲೆ, ಅರಕಲಗೂಡು ತಾಲ್ಲೂಕು, ಮದಗನೂರು ಗ್ರಾಮದಲ್ಲಿ ಸರ್ಕಾರಿ ಸ್ಟೋನ್ ಕ್ರಷರ್ ಘಟಕ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಹುಣಸೂರಿನ ತಾಲ್ಲೂಕಿನಲ್ಲಿರುವ ಪಶು ಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವುದು.

1265(1225) ಶ್ರೀ ವಿ. ಶಾಮಣ್ಣ (ಹುಣಸೂರು) :— ಮಾನ್ಯ ಪಶು ಸಂಗೋಪನೆ ಮತ್ತು ಸಣ್ಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಣಸೂರು ತಾಲ್ಲೂಕಿನಾದ್ಯಂತ ಇರುವ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ? ಇದ್ದರೆ ಅವು ಯಾವುವು?

ಆ) ಉದ್ದೂರು ಹನಗೋಡು ಹೋಬಳಿ ಕೇಂದ್ರ ಸ್ಥಳದಲ್ಲಿರುವ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರವನ್ನು ಮೇಲ್ದರ್ಜೆಗೇರಿಸುವ ವಿಚಾರ ಪರಿಶೀಲನೆಯಲ್ಲಿದೆಯೇ?

ಇ) ಪರಿಶೀಲನೆಯಲ್ಲಿದ್ದಲ್ಲಿ, ಪ್ರಸ್ತಾಪ ಯಾವ ಹಂತದಲ್ಲಿದೆ? ಮೇಲ್ದರ್ಜೆಗೇರಿಸಲು ಇರುವ ಮಾನದಂಡಗಳೇನು?

ಈ) ಕೆಲವು ಅಧಿಸೂಚನೆಯಲ್ಲಿ ಈ ಕುರಿತು ಸರ್ಕಾರವು ಭರವಸೆಯನ್ನು ನೀಡಿದ್ದು, ಇದುವರೆಗೆ ಅನುಷ್ಠಾನಗೊಳ್ಳದಿರಲು ಕಾರಣವೇನು?